# ಸುದ್ದಿ ಸಂಚಯ

## ಏಳಿ! ಎದ್ದೇಳಿ!! ಚಿತ್ರಪ್ರದರ್ಶನ

ಸ್ವಾಮಿ ವಿವೇಕಾನಂದರು 1902, ಜುಲೈ 4ರಂದು ಮಹಾಸಮಾಧಿಯನ್ನು ಹೊಂದಿದರು. ಈ ವರ್ಷದ ಜುಲೈ ನಾಲ್ಕಕ್ಕೆ ನೂರು ವರ್ಷಗಳು ಆದವು. ಈ ಸಂದರ್ಭದಲ್ಲಿ ಅವರ ಸ್ಮರಣಾರ್ಥವಾಗಿ ಮತ್ತು ಅವರ ಸಂದೇಶ ಪ್ರಚಾರವನ್ನು ಹೆಚ್ಚು ತೀವ್ರಗೊಳಿಸಲು ಮೈಸೂರು ರಾಮಕೃಷ್ಣ ಆಶ್ರಮವು "ಏಳಿ! ಎದ್ದೇಳಿ!!" ಎಂಬ ಸ್ವಾಮಿ ವಿವೇಕಾನಂದರ ಜೀವನ ಸಂದೇಶಕ್ಕೆ ಸಂಬಂಧಿಸಿದ ದೇಶಾದ್ಯಂತ ಚಿತ್ರಪ್ರದರ್ಶನದ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿತು.

### ಯೋಜನೆಯ ವಿವರ:

- 1009 ಚಿತ್ರಪ್ರದರ್ಶನ ಕಿಟ್ಟುಗಳನ್ನು ಸಿದ್ಧಪಡಿಸಿ ದೇಶಾದ್ಯಂತ ಕಳಿಸಲಾಗಿದೆ.
- ಪ್ರತಿಯೊಂದು ಕಿಟ್ಟಿನಲ್ಲಿಯೂ 40 ಪ್ಯಾನೆಲ್ಲುಗಳು ಇವೆ.
- ಪ್ರತಿ ಪ್ಯಾನೆಲ್ಲಿನ ಗಾತ್ರ 48 ಸೆ.ಮಿ. x 73 ಸೆ.ಮಿ.
- ಪ್ರತಿ ಪ್ಯಾನೆಲ್ಲಿನಲ್ಲಿಯೂ ವಿವೇಕಾನಂದರ ಜೀವನ-ಸಂದೇಶವನ್ನು ತಿಳಿಸುವ ಬಹುವರ್ಣರಂಜಿತ ಚಿತ್ರಗಳು ಮತ್ತು ಅವಕ್ಕೆ ಸಂಬಂಧಿಸಿದ ಬರಹಗಳು ಇವೆ. ಇದನ್ನು 260 gsm ಡೂಪ್ಲೆಕ್ಸ್ ಬೋರ್ಡಿನ ಮೇಲೆ ಮುದ್ರಿಸಿ ಲ್ಯಾಮಿನೇಟ್ ಮಾಡಲಾಗಿದೆ.
- ಈ ಚಿತ್ರಗಳಲ್ಲಿ ಆಂಗ್ಲ ಬರಹವು ಎಲ್ಲಕ್ಕೂ ಸಮಾನವಾಗಿದೆ. ಆಯಾಯ ರಾಜ್ಯಗಳ ಬೇಡಿಕೆಗನುಗುಣವಾಗಿ ವಿವಿಧ ದೇಶೀಯ ಭಾಷೆಗಳಲ್ಲಿಯೂ ಬರಹಗಳಿವೆ. ಹೀಗೆ ಹಿಂದಿಯಲ್ಲಿ 187, ಕನ್ನಡದಲ್ಲಿ 127, ತಮಿಳಿನಲ್ಲಿ 134, ತೆಲುಗಿನಲ್ಲಿ 85, ಮಲಯಾಳಂನಲ್ಲಿ 17, ಒರಿಯಾದಲ್ಲಿ 16, ಬಂಗಾಳಿಯಲ್ಲಿ 268, ಅಸ್ಸಾಮಿಯಲ್ಲಿ 35, ಮರಾಠಿಯಲ್ಲಿ 66 ಮತ್ತು ಗುಜರಾತಿಯಲ್ಲಿ 71 ಕಿಟ್ಟುಗಳಿವೆ ಹಾಗೂ ಕೇವಲ ಇಂಗ್ಲಿಷ್‌ನಲ್ಲಿ 3 (ಸಂಸ್ಕೃತಕ್ಕಾಗಿ).
- ಪ್ರತಿ ಚಿತ್ರವನ್ನೂ 10 ಮಿ.ಮಿ. ದಪ್ಪದ ಥರ್ಮಕೋಲ್ ಶೀಟ್ ಮೇಲೆ ಅಂಟಿಸಲಾಗಿದೆ. ಅದರ ಅಂಚಿನಲ್ಲಿ PVC ಚಾನೆಲ್ಲನ್ನು ಅಳವಡಿಸಲಾಗಿದೆ. ಪ್ಯಾನೆಲ್ಲುಗಳನ್ನು ಬೆಂಚಿನ ಮೇಲೆಯೂ ಗೋಡೆಯ ಮೇಲೆಯೂ ಸುಲಭವಾಗಿ ಪ್ರದರ್ಶಿಸಬಹುದು. ಹೇಗೆ ಅವನ್ನು ಬಳಸಬೇಕೆಂಬ ವಿವರವನ್ನೂ ತಿಳಿಸಲಾಗಿದೆ.
- 40 ಪ್ಯಾನೆಲ್ಲುಗಳನ್ನೂ 30" x 11" x 20" ಅಳತೆಯ, ಮತ್ತೆ ಬಳಸಬಹುದಾದ ಎರಡು ಕಾರ್ಡ್‌ಬೋರ್ಡ್ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಲಾಗಿದೆ. ಪ್ರತಿ ಬಾಕ್ಸ್‌ನ ತೂಕ ಸುಮಾರು 6.5 ಕೆ.ಜಿ. ಮಾತ್ರ.
- ಈ ಪ್ರದರ್ಶನ ಕಿಟ್ಟನ್ನು ಮತ್ತೆ ಮತ್ತೆ ಬಳಸಬಹುದು. 2002-2003ರ ಅವಧಿಯಲ್ಲಿ ಕನಿಷ್ಠ ಪಕ್ಷ 10 ಬಾರಿಯಾದರೂ ಪ್ರದರ್ಶನ ನಡೆಯಬೇಕೆಂಬುದು ನಮ್ಮ ಆಶಯ. ಪ್ರತಿಯೊಂದು ಪ್ರದರ್ಶನವನ್ನು ಸರಾಸರಿ 1000 ಮಂದಿ ವೀಕ್ಷಿಸಿದರೆ ಒಟ್ಟು ಒಂದು ಕೋಟಿ ಜನರಿಗೆ ವಿವೇಕಾನಂದರ ಸಂದೇಶವು ಈ ವರ್ಷದ ಅವಧಿಯಲ್ಲಿ ತಲಪುತ್ತದೆ ಎಂದು ನಿರೀಕ್ಷಿಸಲಾಗಿದೆ.
- ಶಾಲಾಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ, ವಿವೇಕಾನಂದರ ಜನ್ಮ ದಿನ ಅಥವಾ ಯುವದಿನಾಚರಣೆಯ ಸಂದರ್ಭದಲ್ಲಿ, ದೇವಾಲಯದ ಧಾರ್ಮಿಕ ಕಾರ್ಯಕ್ರಮಗಳಲ್ಲಿ, ಬಹುಜನರು ಸೇರುವ ಸ್ಥಳೀಯ ಉತ್ಸವಗಳಲ್ಲಿ ಇವೇ ಮುಂತಾದ ಸಂದರ್ಭಗಳಲ್ಲಿ ಈ ಚಿತ್ರಪ್ರದರ್ಶನ ಕಿಟ್ಟನ್ನು ಬಳಸಬಹುದು.

ಈ 1009 ಕಿಟ್ಟುಗಳ ಒಟ್ಟು ಉತ್ಪಾದನೆ ಮತ್ತು ಸಾಗಣೆಯ ವೆಚ್ಚ ರೂ. 16 ಲಕ್ಷ. ಪ್ರತಿಯೊಂದು ಕಿಟ್ಟನ್ನು ರೂ.250/- ಅತ್ಯಲ್ಪ ಬೆಲೆಗೆ ಪ್ರದರ್ಶನ ಕಾರ್ಯದಲ್ಲಿ ಭಾಗವಹಿಸುತ್ತಿರುವ ಸಂಸ್ಥೆಗಳಿಗೆ ಕೊಡಲಾಗಿದೆ. ಅದರಿಂದ ನಮಗೆ ಸಿಕ್ಕಿರುವ ಹಣ 2,50,000 ರೂಗಳು ಮಾತ್ರ. ಉಳಿದ ಹಣವನ್ನು ದಾನಿಗಳ ಮೂಲಕ, ಸ್ಪಾನ್ಸರ್‌ಶಿಪ್ ಮೂಲಕ ಪಡೆದಿದ್ದೇವೆ. ಸ್ಪಾನ್ಸರ್‌ಶಿಪ್ ಹಣ ಪ್ಯಾನಲ್ ಒಂದಕ್ಕೆ ರೂ. 25,000/-ನಂತೆ ನಮಗೆ 37 ಸ್ಪಾನ್ಸರ್ಸ್ (ಪ್ರಾಯೋಜಕರು) ದೊರಕಿದ್ದಾರೆ. ಇವರುಗಳ ಹೆಸರು ಮತ್ತು ವಿಳಾಸವನ್ನು ಪ್ಯಾನೆಲ್ ಕೆಳಭಾಗದಲ್ಲಿ ಮುದ್ರಿಸಲಾಗಿದೆ.

ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ 30.6.2002 ಭಾನುವಾರದಂದು ಈ ಚಿತ್ರಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಲಾಯಿತು. ರಾಮಕೃಷ್ಣ ಮಹಾಸಂಘದ ಹಿರಿಯ ಸ್ವಾಮಿಗಳಾದ ಸ್ವಾಮಿ ವ್ಯೋಮಾನಂದಜಿಯವರು ದೀಪ ಬೆಳಗುವುದರ ಮೂಲಕ ಇದನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಅವರು ವಿವೇಕಾನಂದರ ಹಿರಿಮೆಯನ್ನು ಕುರಿತು ಅಮೋಘವಾಗಿ ಮಾತನಾಡಿದರು. ಮುಖ್ಯ ಭಾಷಣಕಾರರಾಗಿದ್ದ ಸಾಹಿತಿ ಹೆಚ್.ಎಸ್. ಮುರಳೀಧರ ಅವರು, ಸ್ವಾಮಿ ವಿವೇಕಾನಂದರು ಧರ್ಮಕ್ಕೆ ಒಂದು ಮಾನವೀಯ ಆಯಾಮವನ್ನು ಇತ್ತರು ಎಂಬುದನ್ನು ವಿಚಾರಪೂರ್ಣವಾಗಿ ವಿವರಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ಸುರೇಶಾನಂದಜಿಯವರು ಸ್ವಾಮಿ ವಿವೇಕಾನಂದರ ಅದ್ಭುತ ಸಾಧನೆಯನ್ನು ಕುರಿತು ಮಾತನಾಡಿ ಚಿತ್ರಪ್ರದರ್ಶನದ ಮಹತ್ವವನ್ನು ವಿವರಿಸಿದರು. ಒಂದು ವಾರ ಚಿತ್ರಪ್ರದರ್ಶನ ನಡೆಸಲಾಯಿತು.

### ಬೆಂಗಳೂರಿನಲ್ಲಿ ಸಮಾರಂಭ

ಮೇಲೆ ವಿವರಿಸಿದ ದೇಶಾದ್ಯಂತ ವರ್ಣರಂಜಿತ ಚಿತ್ರಪ್ರದರ್ಶನದ ಸಮರ್ಪಣೆಯ ಕಾರ್ಯಕ್ರಮವನ್ನು ಬೆಂಗಳೂರು ರಾಮಕೃಷ್ಣ ಮಠದಲ್ಲಿ 3.7.2002 ಬುಧವಾರದಂದು ನೆರವೇರಿಸಲಾಯಿತು. ಆ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು ಸ್ವಾಮಿ ವಿವೇಕಾನಂದರ ಅಮೋಘ ವ್ಯಕ್ತಿತ್ವವನ್ನು ಕುರಿತು ಮಾತನಾಡಿ ಸಭಿಕರನ್ನು ಹರ್ಷಸಾಗರದಲ್ಲಿ ಮುಳುಗಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿಯವರು, ವಿವೇಕಾನಂದರ ಸಂದೇಶದ ಮಹತ್ವವನ್ನು ವಿವರಿಸಿ, ಈ ಸಂದೇಶದ ಪ್ರಸಾರದಲ್ಲಿ ಅಪೂರ್ವ ಪಾತ್ರವನ್ನು ವಹಿಸಲಿರುವ ಈ ಚಿತ್ರಪ್ರದರ್ಶನ ಯೋಜನೆಯನ್ನು ಬಹಳ ಪ್ರಶಂಸಿಸಿದರು. ಬೆಂಗಳೂರು ರಾಮಕೃಷ್ಣ ಮಠದಲ್ಲಿಯೂ ಒಂದು ವಾರದ ಪರ್ಯಂತ ಚಿತ್ರಪ್ರದರ್ಶನ ನಡೆಯಿತು.

ಇದೇ ಚಿತ್ರಪ್ರದರ್ಶನದ ಉದ್ಘಾಟನೆಯನ್ನು 4.7.2002 ರಂದು ವಿವೇಕಾನಂದ ಫೌಂಡೇಷನ್, ಮೈಸೂರು, ವತಿಯಿಂದ ಬೆಂಗಳೂರು ಆರ್.ವಿ.ಟೀಚರ್ಸ್ ಕಾಲೇಜಿನಲ್ಲಿ ನಡೆಸಲಾಯಿತು. ಕರ್ನಾಟಕದ ಶಿಕ್ಷಣ ಮಂತ್ರಿಗಳಾದ ಮಾನ್ಯ ಪ್ರೊ.ಬಿ.ಕೆ. ಚಂದ್ರಶೇಖರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸ್ವಾಮಿ ಹರ್ಷಾನಂದಜಿಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅಲ್ಲಿಯೂ ಒಂದು ವಾರದ ಚಿತ್ರಪ್ರದರ್ಶನ ನಡೆಯಿತು.

**ದೇಶದ ಮೂಲೆ ಮೂಲೆಗಳಿಂದ ಉತ್ತೇಜಕ ಪ್ರತಿಕ್ರಿಯೆಗಳು ಈ ಚಿತ್ರಪ್ರದರ್ಶನದ ಯೋಜನೆಯ ಯಶಸ್ಸಿನ ದ್ಯೋತಕವಾಗಿದೆ.**